ಪೆಡಂಭೂತವಾಗಿ ನನಗೆ ತೋರಿತು. ಈ ಘಟನೆ ನಡೆದು ಅನೇಕಾನೇಕ ವರ್ಷಗಳೇ ಕಳೆದಿದ್ದರೂ ನನಗಿನ್ನೂ ಆ ನೆನಪು ಮಾಸಿಲ್ಲ. ಶಿವಣ್ಣ ಈಗಲೂ ಊರಲ್ಲೆ ಇದ್ದಾನೆ. ಊರಿಗೆ ಹೋದಾಗಲೆಲ್ಲ ಅವನನ್ನು ಕಾಣುತ್ತೇನೆ. ಪರಸ್ಪರ ಗೆಳೆತನ ಮನೆಮಾಡಿದೆ. ನಮ್ಮಿಬ್ಬರ ಗೆಳೆತನಕ್ಕೆ ಈಗೇನೂ ಕುಂದು ಬಂದಿಲ್ಲ. ಆದರೆ, ಶಿವಣ್ಣನಿಗೆ ಆ ಘಟನೆಯ ನೆನಪೇ ಇಲ್ಲ.

ಜಾತಿಯನ್ನೇ ಕುರಿತ ಇನ್ನೊಂದು ಸ್ವಾರಸ್ಯಕರ ಘಟನೆಯನ್ನು ಇಲ್ಲೇ ಹೇಳಿಬಿಡುತ್ತೇನೆ. ಈಗ್ಗೆ ಕೆಲವು ವರ್ಷಗಳ ಹಿಂದಿನ ಮಾತು. ಏಪ್ರಿಲ್ ತಿಂಗಳ ಕೊನೆಯ ಭಾಗ. ಬೇಸಿಗೆ ಧಗ ಧಗ, ಭಗ ಭಗ ಅನ್ನುತ್ತಿತ್ತು. ಆಗೊಮ್ಮೆ ಕೊಡಗಿನ ಕುಶಾಲನಗರದಿಂದ ಮೈಸೂರಿಗೆ ಹೊರಟುಬರಲು ಬಸ್ಸು ನಿಲ್ದಾಣದಲ್ಲಿ ಬಸ್ಸಿಗಾಗಿ ಕಾಯುತ್ತಾ ನಿಂತಿದ್ದೆ. ಮಟ ಮಟ ಮಧ್ಯಾಹ್ನ. ಬಿಸಿಲು ಎತ್ತೆತ್ತಲು ಅಮರಿಕೊಂಡು ದೇಹ ಉಸ್ ಬುಸ್ ಅನ್ನುವ ಕಾಲ. ನನ್ನದೂ ಅದೇ ಪರಿಸ್ಥಿತಿ ಆಗಿತ್ತು ಅನ್ನಿ. ಜೊತೆಗೆ ಮೈಸೂರು ಕಡೆಗೆ ಹೊರಡುವ ಬಸ್ಸುಗಳೂ ಕಡಿಮೆ. ಬರುವ ಬಸ್ಸುಗಳು ಸಾಮಾನ್ಯವಾಗಿ ಮಡಿಕೇರಿ ಕಡೆಯಿಂದ ಬರುತ್ತಿದ್ದವು. ಅವು ಕೂಡ ಕುಶಾಲನಗರಕ್ಕೆ ಬರುವ ಹೊತ್ತಿಗೆ ಹೌಸ್‌ಫುಲ್ ಆಗಿರುತ್ತಿದ್ದವು. ಆಗಿನ ದಿನಗಳಲ್ಲಿ ಬಸ್ಸಿಗಾಗಿ ಕಾಯುವುದು ಎಲ್ಲಕಡೆ ಸಾಮಾನ್ಯವಾಗಿ ಒಂದೇ ಆಗಿತ್ತು. ಹಾಗಾಗಿಯೇ, ನಾನು ಬಸ್ಸು ನಿಲ್ದಾಣಕ್ಕೆ ಬಂದು, ಬಸ್ಸಿಗಾಗಿ ಕಾಯುವ ಭರಾಟೆಯಲ್ಲಿ ಅಲ್ಲೇ ಪೇಪರ್ ಅಂಗಡಿಯಲ್ಲಿದ್ದ ಪೇಪರ್‌ಗಳನ್ನು ಕೊಂಡು ತಿರುವು ಹಾಕಿದೆ; ನಿಲ್ದಾಣದ ಕ್ಯಾಂಟೀನಿನಲ್ಲಿ ಬಿರು ಬಿಸಿಲಿನ ನಡುವೆಯೂ ಒಂದೆರಡು ಕಪ್ ಟೀ ಕುಡಿದು ಮುಗಿಸಿದೆ; ಟೀ ಜೊತೆಗೆ ಜೇಬಿನಲ್ಲಿದ್ದ ಕಾಸು ಕೂಡ ಸ್ವಲ್ಪ ಮುಗಿಯಿತು. ಅಲ್ಲೇ ಅತ್ತಗೂ ಇತ್ತಗೂ ಅಡ್ಡಾಡುತ್ತಾ 'ಕಾಲು ಹರಣ' ಮಾಡುತ್ತಿದ್ದೆ. ಅಷ್ಟುಹೊತ್ತಿಗೆ ನಾನು ಬಸ್ಸು ನಿಲ್ದಾಣಕ್ಕೆ ಬಂದು ಅಂದಾಜು ಒಂದೂವರೆ ಗಂಟೆಯೇ ಆಗಿತ್ತು. ಆದರೂ ಬಹು ತಾಳ್ಮೆಯಿಂದ ನಾನು ಕಾಯ್ದೆ, ಜೊತೆಗಿದ್ದವರೂ ಕಾಯ್ದರು. ಎಷ್ಟಿದ್ದರೂ ನಮ್ಮ ದೇಶದಲ್ಲಿ 'ನಿಧಾನವೇ ಪ್ರಧಾನ' ಅಲ್ಲವೆ? ಬೇಗ ಅಂತಾಗಿದ್ದರೆ ದೇಶಕ್ಕೆ ಸ್ವಾತಂತ್ರ್ಯ ಸುಭಾಷ್ ಚಂದ್ರ ಬೋಸ್ ಅವರ ನೇತೃತ್ವದಲ್ಲಿ 1942ರ ಹೊತ್ತಿನಲ್ಲೇ ಬರುತ್ತಿತ್ತಲ್ಲವೆ? ಇರಲಿ, ಈ ಬಗ್ಗೆ ಇಲ್ಲಿ ನಾವು ನೀವು ಹೆಚ್ಚು ಚರ್ಚಿಸುವುದು ಬೇಡ. ಒಟ್ಟಿನಲ್ಲಿ ಮೈಸೂರಿಗೆ ಹೋಗುವ ಬಸ್ಸನ್ನು ಕಾಯುತ್ತಿರುವಾಗ, ಅಗೋ ಮಡಿಕೇರಿ ಕಡೆಯಿಂದ ಜಗ್ಗಾಡಿಕೊಂಡು ಒಂದು ಬಸ್ಸು ಕುಶಾಲನಗರ ಬಸ್ಸು ನಿಲ್ದಾಣಕ್ಕೆ ಬಂದೇ ಬಿಟ್ಟಿತು. ಆಹಾ! ಅದನ್ನು ನೋಡುತ್ತಿದ್ದ ಹಾಗೆ ನಾನೂ ಸೇರಿ ಬಸ್ಸು ನಿಲ್ದಾಣದಲ್ಲಿದ್ದವರೆಲ್ಲ ಆನಂದತುಂದಿಲರಾಗಿ ಅರ್ಧದಲ್ಲೇ ಬಸ್ಸು ತಡೆದುಬಿಡುವಂತೆ ದಿಢೀರನೆ ನುಗ್ಗಿದೆವು. ಅಷ್ಟು ಜನಗಳ ನಡುವೆಯೂ ಚಾಣಾಕ್ಷನಾದ ಡ್ರೈವರ್ ಹೇಗೋ ಸಾವರಿಸಿಕೊಂಡು ಯಾರಿಗು ಏನೂ ಊನವಾಗದಂತೆ ಬಸ್ಸನ್ನು ನಿಗದಿತವಾಗಿರುವ ಜಾಗದಲ್ಲೇ ತಂದು ನಿಲ್ಲಿಸಿದ್ದನ್ನು ನೋಡಿದರೆ, ಆ ವರ್ಷದ ರಾಜ್ಯೋತ್ಸವ ಪ್ರಶಸ್ತಿ ಖಂಡಿತ ಅವನಿಗೆ ಬರಲೇಬೇಕೆಂದು ನನಗನ್ನಿಸಿತು. ಬಸ್ಸು ನಿಲ್ಲುತ್ತಿದ್ದ ಹಾಗೆ, ಇಳಿಯುವವರನ್ನು ಒತ್ತರಿಸಿ ಅವರಿನ್ನಷ್ಟು ಬಸ್ಸಿನೊಳಗೆ ತೂರಿಹೋಗಿ ಡ್ರೈವರ್ ಸೀಟಿನ ಮೂಲಕವೇ ಇಳಿಯುವಂತೆ ಮಾಡಿ, ನಾವೆಲ್ಲ ಬಸ್ಸಿನೊಳಕ್ಕೆ ನುಗ್ಗೇನುಗ್ಗಿದೆವು. ಹಾಗಾಗಿ, ನನ್ನೆರಡು ಕಾಲುಗಳಿಗೂ ಬಸ್ಸಿನ ಕೊನೆಯಲ್ಲಿ ತಳವೂರುವಷ್ಟು ಜಾಗ ಲಭ್ಯವಾಯಿತು. ಬಸ್ಸಿನೊಳಗೆ ನಿಲ್ಲುವುದಕ್ಕೆ ಜಾಗ ಸಿಕ್ಕಮೇಲೆ ಇನ್ನು ನನ್ನ ಆನಂದಕ್ಕೆ ಪಾರವೆಲ್ಲಿ? ಏದುಸಿರು ಬಿಡುತ್ತಲೇ ಒಮ್ಮೆ ನನ್ನ ಅಂಗಿಯ ಕಡೆ ಕಣ್ಣು ಹಾಯಿಸಿದೆ, ಇಸ್ತ್ರಿ ಮಾಡಿ ಅನೇಕ ದಿನಗಳಾಗಿವೆಯೇನೊ ಅನ್ನುವಷ್ಟು ನೆರಿಗೆಗಳು ಎದ್ದು ಕಾಣುತ್ತಿದ್ದವು. ಅದರಿಂದ ನನಗೇನೂ ಬೇಸರವಾಗಲಿಲ್ಲ. ಬೇಸರ ಮಾಡಿಕೊಂಡಿದ್ದರೆ ನಾನಿಲ್ಲಿವರೆಗೆ ಬರುತ್ತಿದ್ದೆನೆ? ಇರಲಿ, ಆ ಚಿಂತೆ ಬೇಡ. ಹಾಗೆ ಜಗ್ಗಾಡುವ ಜನಗಳ ನಡುವೆ ಜಗ್ಗಾಡುತ್ತಲೇ ನಿಂತಿರುವಾಗ, ಅದರೊಳಗಡೆಯಿಂದಲೇ ಒಂದಿಷ್ಟು

